ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 4/2021

(ಪ್ರಾಸಾ-2 ಚಾಸಾ-3)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 05.11.2024

| | | |
|---|---|---|
| ಸಾಕ್ಷಿದಾರರ ಹೆಸರು | - | ಭಾಗಮ್ಮ |
| ಗಂಡನ ಹೆಸರು | - | ರಮೇಶ್ |
| ವಯಸ್ಸು | - | 50 ವರ್ಷ, |
| ಉದ್ಯೋಗ | - | ತೋಟದ ಕೆಲಸ |
| ವಾಸ | - | ಗಂಗವಾರ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಪ್ರಾಸಾ-1 ಮತ್ತು ಚಾಸಾ-2 ಗೊತ್ತು. ನಾನು ಪರಿಶಿಷ್ಟ ಜಾತಿಯ ಬೋವಿ ಜಾತಿಗೆ ಸೇರಿದವರು. ಪ್ರಾಸಾ-1 ಮತ್ತು ಚಾಸಾ-2 ಆದಿ ಕರ್ನಾಟಕ ಜಾತಿಗೆ ಸೇರಿದವರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಆರೋಪಿ ಒಕ್ಕಲಿಗ ಜನಾಂಗಕ್ಕೆ ಸೇರಿದವರು.

2. ಈಗ ಸುಮಾರು ನಾಲ್ಕು ವರ್ಷಗಳ ಹಿಂದೆ ಮಂಗಳವಾಗ ನಾನು, ಪ್ರಾಸಾ-1 ಮತ್ತು ಚಾಸಾ-2 ಮಧ್ಯಾಹ್ನ 3 ಘಂಟೆಗೆ ಸೊಪ್ಪು ತರಲು ಬಾಲೇಪುರದ ರಾಜಣ್ಣರವರ ತೋಟಕ್ಕೆ ಹೋಗಿದ್ದು ಆರೋಪಿಯ ತೋಟಕ್ಕೆ ನಾವು ಹೋಗಿರಲಿಲ್ಲ ಹಾಗೂ ಆರೋಪಿಯ ತೋಟದಲ್ಲಿ ಸೊಪ್ಪು ಸಹ ಕಿತ್ತಿರಲಿಲ್ಲ. ಆದರೆ ಆರೋಪಿ ನಮ್ಮ ತೋಟದಲ್ಲಿ ಸೊಪ್ಪನ್ನು ಕಿತ್ತಿದ್ದೀರಾ ಎಂದು ನನಗೆ, ಪ್ರಾಸಾ-1 ಮತ್ತು ಚಾಸಾ-2 ಇವರಿಗೆ ದೊಣ್ಣೆಯಲ್ಲಿ ಹೊಡೆದರು. ಆರೋಪಿ ನಮಗೆ, ನಿಮ್ಮಮ್ಮನಾಕೇಯಾ ಎಂದು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿಯು ಬೇರೆ ಏನನ್ನೂ ಮಾಡಿರುವುದಿಲ್ಲ. ನಾವು ಮೂವರು ಹಾಗೂ ಆರೋಪಿ ಹೊರತುಪಡಿಸಿ ಸ್ಥಳದಲ್ಲಿ ಘಟನೆಯ ಸಮಯದಲ್ಲಿ ಬೇರೆ ಯಾರು ಇರಲಿಲ್ಲ. ನಂತರ ನಾವು ಮೂವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ.

3. ನಂತರ ಗಲಾಟೆ ವಿಚಾರಕ್ಕೆ ನಾವು ಪೋಲಿಸರಿಗೆ ದೂರು ನೀಡಿದ್ದು ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು ಪೋಲಿಸರಿಗೆ ಸ್ಥಳದಿಂದ ನಾನು ಆರೋಪಿ ನನ್ನನ್ನು ಹೊಡೆದ ಜಾಗದಲ್ಲಿ ಒಂದು ದೊಣ್ಣೆಯನ್ನು ಎತ್ತಿಕೊಟ್ಟೆನು. ಆಗ ಪೋಲಿಸರು ಸ್ಥಳದಲ್ಲಿ ಬರವಣಿಗೆ ಮಾಡಿಕೊಂಡರು. ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಹೆಬ್ಬಟ್ಟಿನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಎರಡು ದೊಣ್ಣೆಗಳಲ್ಲಿ ಮು.ಮಾ-1 ದೊಣ್ಣೆಯನ್ನು ನೋಡಿ ಗುರುತಿಸಿದ್ದು ಸದರಿ ದೊಣ್ಣೆಯನ್ನು ತಾನು ಹಾಜರುಪಡಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-2 ಪಂಚನಾಮೆ ಸಮಯದಲ್ಲಿ ತೋಟದವರಾದ ಚಂದ್ರ ಮತ್ತು ಇತರರು ಹಾಜರಿದ್ದರು. ಫ್ರಾಸಾ-1 ಮತ್ತು ಚಾಸಾ-2 ಇವರ ಮೇಲೆ ಹಲ್ಲೆ ಮಾಡಿದ ದೊಣ್ಣೆಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

4. ಆರೋಪಿ ನನಗೆ, ಫ್ರಾಸಾ-1 ಹಾಗೂ ಚಾಸಾ-2 ಇವರಿಗೆ ಬಟ್ಟೆ ಹಿಡಿದು ಎಳೆದಾಡಿದರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಮಗೆ ಚಾಸಾ-4 ಮತ್ತು 5 ಸಹ ಗಲಾಟೆ ಸಮಯದಲ್ಲಿ ಹಾಜರಿದ್ದರು ಎಂದರೆ ಸರಿ. ಚಾಸಾ-6 ರವರು ನ್ಯಾಯ ಪಂಚಾಯ್ತಿ ಮಾಡುತ್ತೇನೆ ಎಂದು ಹೇಳಿ ಮಾಡದೇ ಇದ್ದದ್ದಕ್ಕೆ ಫ್ರಾಸಾ-1 ತಡವಾಗಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ.

5. ದೂರು ಕೊಟ್ಟ ಮಾರನೇ ದಿನ ಪೋಲಿಸರು ಗಲಾಟೆ ನಡೆದ ಸ್ಥಳಕ್ಕೆ ಬಂದಿದ್ದು ಫ್ರಾಸಾ-1 ಸಹ ಒಂದು ಕೋಲನ್ನು ಪೋಲಿಸರಿಗೆ ಎತ್ತಿಕೊಟ್ಟರು ಎಂದರೆ ಸರಿ. ನಿಪಿ-2 ಪಂಚನಾಮೆ ಸಮಯದಲ್ಲಿ ಚಾಸಾ-7 ಮತ್ತು 8 ಸಹ ಹಾಜರಿದ್ದು ಪಂಚನಾಮೆಗೆ ಸಹಿ ಮಾಡಿದ್ದಾರೆ ಎಂದರೆ ಸರಿ. ಈಗ ತೋರಿಸಿದ ಮು.ಮಾ-2 ದೊಣ್ಣೆಯನ್ನು ಫ್ರಾಸಾ-

1 ರವರು ಪೋಲಿಸರಿಗೆ ಎತ್ತಿ ಕೊಟ್ಟರು ಎಂದರೆ ಸರಿ. ಆರೋಪಿ ನಮಗೆ ಕೈಗಳಿಂದ ಸಹ ಹೊಡೆದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಈ ಪ್ರಕರಣದಲ್ಲಿ ಬೇರೆ ಪ್ರತ್ಯಕ್ಷ ಸಾಕ್ಷಿದಾರರು ಇದ್ದು ಅವರ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ರೂ.2000/- ಖರ್ಚಿನೊಂದಿಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು